'ಆ ಮಾತು ದಮಯಂತಿಗೆ ಈಟಿಯ ಮೊನೆಯಿಂದ ಕಿವಿಗಳಿಗೆ ಚುಚ್ಚಿದಂತಾಯಿತು. ಕಣ್ಣು ಹನಿಗೂಡಿತು. 'ಹರಹರ! ಶಿವಾ!' ಎನ್ನುತ್ತ ಹೀಗೆ ನುಡಿದಳು.

'ನನ್ನ ಮನಸ್ಸಿನಲ್ಲಿ ಪುನಃ ಸ್ವಯಂವರ ಯೋಚನೆ ಇದೆಯೆಂದು ತಿಳಿದಿರಾ? ನೀವು ಇಲ್ಲಿಗೆ ಬರಬೇಕೆಂದು ಈ ವಾರ್ತೆಯನ್ನು ಕಲ್ಪಿಸಿದೆ. ಅದು ಸಫಲವಾಯಿತು. ನೀವು ಬಂದಿರಿ'.

'ನಿಮ್ಮ ರೂಪು ನನ್ನ ಮನಸ್ಸಿನಲ್ಲಿ ಸೊಗಸುಗೊಂಡಿದೆ. ಅದನ್ನೇ ನಾನು ಹಿತವಾಗಿ ನಂಬಿರುವೆ. ಸಕಲ ಧರ್ಮವಿಚಾರ ಅರಿತ ತಮಗೆ ಈ ವಿಕಾರ ರೂಪಿನ ಸೋಗು ಏತಕ್ಕೆ? ನಿಮ್ಮದು ವಿಷ್ಣುವಿನ ಪ್ರತಿರೂಪ. ವ್ಯರ್ಥವಾದ ಮಾತುಗಳೇಕೆ? ಸುಮ್ಮನಿರಿ' ಎಂದು ಹೇಳಿ ಅವನ ವಿಕೃತ ರೂಪ ನೋಡುತ್ತ ಕಣ್ಣೀರಧಾರೆ ಹರಿಸುತ್ತ, ಮಾತು ಮುಂದುವರೆಸಿ,

## ನಡೆಯುತೆಡಹಿದ ಪಟ್ಟದಾನೆಯ ಪಿಡಿದು ಕೊಲ್ಲುವರುಂಟೆ

'ನಳನೃಪತಿಯೇ, ನಡೆಯುವಾಗ ಎಡವಿದ ಪಟ್ಟದಾನೆಯನ್ನು ಹಿಡಿದು ಕೊಲ್ಲುವರೇ? ನಿಮ್ಮನ್ನು ನಂಬಿದ ಮಡದಿ ನಾನು. ನನ್ನೊಡನೆ ಬಿರುನುಡಿಯನ್ನು ಏಕಾಡುವಿರಿ? ಕಾಡಿನಲ್ಲಿ ತುಂಬಾ ನೊಂದರೂ ಈ ದೇಹವನ್ನು ಬಿಡದೆ ಕಾಪಾಡಿಕೊಂಡು ಬಂದೆ. ಇನ್ನು ಈ ಪ್ರಾಣದ ಗೊಡವೆ ಏಕೆ?' ಎಂದು ನಿರಾಶಳಾಗಿ ಹೇಳಿ, ತಾನು ಅವನನ್ನು ಹುಡುಕಲು ನಡೆಸಿದ ನಿಜ ಪ್ರಯತ್ನವನ್ನು ಹೀಗೆ ತಿಳಿಸಿದಳು.

'ರಾಯನೇ, ಕಡುನೊಂದಿರುವ ಸತಿಯೊಡನೆ ನೀವು ಈ ರೀತಿ ಮಾತನಾಡುವುದು ನ್ಯಾಯವೇ? ನಿಮ್ಮನ್ನು ಹುಡುಕಲು ಸೇವಕರನ್ನು ದಿಕ್ಕು ದಿಕ್ಕಿಗೆ ಕಳುಹಿಸಿದೆ. ನಿಮ್ಮ ಮಾಯಾ ರೂಪಿನಿಂದ ಅವರು ಪತ್ತೆ ಹಚ್ಚಲಾಗದೆ ಬಳಲಿದರು. ಅಯೋಧ್ಯೆಯ ರಾಜನಲ್ಲಿ ನೂತನ ಸಾರಥಿಯಿರುವನೆಂದು ತಿಳಿದಾಗ– ನೀವೇ ಇರಬಹುದೆಂದು ಅಂತರ್ಯ ಮಿಡಿಯಿತು. ಕೂಡಲೇ ಬ್ರಾಹ್ಮಣ ಸುದೇವನನ್ನು ನಿಮ್ಮಲ್ಲಿಗೆ ಕಳುಹಿಸಿದೆ. ಅವನು ಕೇಳಿದ ಪ್ರಶ್ನೆಗೆ ನೀವು ಸರಿಯಾದ ಉತ್ತರ ನೀಡಿದಿರಿ. ಇನ್ನೂ ಸಂಶಯ ಉಳಿಯಲು ಅದರ ಪರಿಹಾರಕ್ಕಾಗಿ ಸ್ವಯಂವರದ ನೆಪ ಒಡ್ಡಿ ನೀವು ಬರುವಂತೆ ಮಾಡಿದೆ. ಇದರಲ್ಲಿ ತಪ್ಪೇನಿದೆ?' ಎಂದು ಇರುವ ವಿಷಯವನ್ನು ತಿಳಿಸಿ,

'ನಳನೃಪನೇ, ಮದುವೆಯಾಗಿ ಬಂದು ಯೌವನವನ್ನು ನಿಮಗೆ ಒಪ್ಪಿಸಿದೆ. ನನ್ನ ತನು, ಮನ, ವಾಕ್ಕು, ಕಾಯ, ಕರ್ಮಗಳಲ್ಲಿ ನಿಮಗೆ ಎರಡು ಬಗೆದವಳಲ್ಲ. ನೀವೇ ನನಗೆ ಗತಿ ಎಂದು ನಾನಿರುವುದು ನಿಮಗೆ ತಿಳಿಯದೆ?

'ದೊರೆಯೇ, ನನ್ನನ್ನು ರಕ್ಷಿಸು. ಕೈಹಿಡಿದು ಸಲಹು. ನಾನು ಹೇಳುತ್ತಿರುವ ಈ ನುಡಿಗೆ ಯಮ, ವರುಣ, ವಾಯು, ಇಂದ್ರ ಹಾಗೂ ಶ್ರೀ ಹರಿಯೇ ಸಾಕ್ಷಿ' ಎಂದು ತಲೆಬಾಗಿ ವಂದಿಸಿದಳು.

## ಮೇಘದಲಿ ನುಡಿದನು ವಾಯು ನಳನೃಪನೊಡನೆ ಸತ್ಯವನು

ಆಗ ಮೇಘ ಮಂಡಲದಿಂದ ವಾಯುವು ನಳನೃಪನಿಗೆ ಸತ್ಯವನ್ನು ಹೀಗೆ ಹೇಳಿದನು:

'ಚತುರ ರಾಜನೇ ಕೇಳು. ದಮಯಂತಿ ಘನ ಗೌರವ ಸ್ತ್ರೀ. ಜಗತ್ತಿನಲ್ಲಿ ಪವಿತ್ರಳು. ನೀನು ಸಂಶಯವನ್ನು ಬಿಡು. ಸತಿಯನ್ನು ರಕ್ಷಿಸು' ನಳ ಮಹಾರಾಜನು ವಾಯುವಿನ ಮಾತಿಗೆ ಸಮ್ಮತಿಸಿ,

'ನಾನು ಕಲಿ ಪುರುಷನ ಕಪಟದಿಂದ ತುಂಬ ನೊಂದೆನು. ನಿಮ್ಮ ದರ್ಶನದಿಂದ ನನ್ನ ಬವಣೆ ದೂರವಾಯಿತು. ನಾನು ಕೃತಾರ್ಥನಾದೆ' ಎಂದು ವಿಜ್ಞಾಪಿಸಿಕೊಂಡನು.

ಇನ್ನು ಯಾವುದೇ ಅಳುಕು, ಭಯವಿಲ್ಲ. ಎಲ್ಲ ಒಳಿತಾಯಿತು ಎಂದುಕೊಂಡು ಮನಸ್ಸಿನಲ್ಲಿ ಜಗನ್ಮೋಹನವಾದ ಪಕ್ಷಿಗಳನ್ನು ನೆನೆದನು. ತಕ್ಷಣ ದಿವ್ಯ ವಸ್ತ್ರಗಳು ಕಾಣಿಸಿಕೊಂಡವು. ನಳನು ಆ ವಸ್ತ್ರಗಳನ್ನು ಧರಿಸಿದ ಕೂಡಲೇ ವಿಕಾರ ರೂಪು ಇಲ್ಲವಾಯಿತು. ಅವನು ಮೊದಲಿನಂತೆ ಪರಮತೇಜದ ದಿವ್ಯ ಶರೀರದಲ್ಲಿ ಪ್ರಕಾಶಿಸಿದನು.

ಆಗ ಆಕಾಶದಲ್ಲಿ ದೇವತೆಗಳು ದುಂದುಭಿಯನ್ನು ಮೊಳಗಿಸಿ ಮಲ್ಲಿಗೆ ಹೂಗಳ ಮಳೆಗರೆದರು. ದೇವಾಂಗನೆಯರು ನಳ ಮಹಾರಾಜನನ್ನು ಹರಸುತ್ತ, ಅವನ ಮೇಲೆ ಮಂಗಳಾಕ್ಷತೆಯನ್ನು ಹಾಕಿದರು.

ದೇವತೆಗಳು ಕೊಂಡಾಡುತ್ತಿರಲು; ಯಮ ಸೂರ್ಯ ಬ್ರಹ್ಮಾದಿಗಳು



## ಇಲ್ಲಿಯವರೆಗೆ

ದಮಯಂತಿಯನ್ನು ಚೈದ್ಯಪುರದಲ್ಲಿ ಕಂಡಿರುವುದಾಗಿ, ಆಕೆ ತನ್ನ ಚಿಕ್ಕಮ್ಮನೊಂದಿಗೆ ಇರುವುದಾಗಿ ಸುದೇವನು ಧರ್ಮರಾಜನಿಗೆ ಹೇಳುತ್ತಾನೆ. ಈ ವಾರ್ತೆಯನ್ನು ಕೇಳಿದ ಭೀಮನೃಪನ ಮುಖ ಅರಳುತ್ತದೆ. ತಕ್ಷಣ ತನ್ನ ಸಚಿವರನ್ನು ಕರೆದು ಉಡುಗೊರೆ ನೀಡಿ ಮಗಳನ್ನು ಕರೆದು ತರಲು ಕಳಿಸುತ್ತಾನೆ. ಸುಬಾಹು ದೊರೆ ಪಲ್ಲಕ್ಕಿ ವ್ಯವಸ್ಥೆ ಮಾಡಿ ದಮಯಂತಿಯನ್ನು ಕಳುಹಿಸಿಕೊಡುವ ವ್ಯವಸ್ಥೆ ಮಾಡುತ್ತಾನೆ. ಮಗಳನ್ನು ಕಂಡ ತಾಯಿ ಅಪ್ಪಿ ಮುದ್ದಾಡಿದಳು. ದಮಯಂತಿ ಮಗ ಇಂದ್ರಸೇನ ಹಾಗೂ ಮಗಳು ಚಂದ್ರಾಸ್ಯರನ್ನು ತಬ್ಬಿಕೊಂಡು ಸಂತೋಷಪಟ್ಟಳು. ನಳನ ಪತ್ತೆಯಾಗದ ಹಿನ್ನೆಲೆಯಲ್ಲಿ ದಮಯಂತಿಗೆ ಮರು ಸ್ವಯಂವರ ಏರ್ಪಡಿಸುವ ಚಿಂತನೆ ನಡೆಯುತ್ತದೆ. ಬಾಹುಕನ ವೇಷದಲ್ಲಿರುವ ನಳನಿಗೆ ವಿಪ್ರೋತ್ತಮನಿಂದ ಈ ವಿಷಯ ತಿಳಿದು ಚಿಂತೆ ಶುರುವಾಗುತ್ತದೆ.

ಶುಭವಾಗಲೆಂದು ಆಶೀರ್ವದಿಸುತ್ತಿರಲು; ದಮಯಂತಿಯು ಪತಿಯ ಪಾದಗಳಿಗೆ ವಂದಿಸಿದಳು. ನಳನು ಅವಳನ್ನು ಹರ್ಷದಿಂದ ಹಿಡಿದೆತ್ತಿ ಬಿಗಿದಪ್ಪಿಕೊಂಡನು. ಬ್ರಾಹ್ಮಣರು ಸಂಭ್ರಮಿಸಿದರು. ದಯಾಮಯನಾದ ಶ್ರೀ ಹರಿ ಅವರನ್ನು ಕರುಣೆಯಿಂದ ಕಾಪಾಡಿದನು.

## ನಳ ಭೂಪಾಲನ ಅಭ್ಯುದಯ

ಪಾಂಡು ಕುಮಾರನೇ ಕೇಳು. ನಳಭೂಪಾಲನ ಅಭ್ಯುದಯವನ್ನು ಮಂಗಳಮಯ ಏಳಿಗೆಯನ್ನು ದಮಯಂತಿಯ ತುಂಬು ಸಂಭ್ರಮ ಆನಂದವನ್ನು ಏನೆಂದು ವರ್ಣಿಸಲಿ.

ನಳನು ಸಂತೋಷದಿಂದ ಸ್ನಾನವನ್ನು ಮಾಡಿ ರೇಷ್ಮೆಯ ವಸ್ತ್ರಧರಿಸಿ ರತ್ನಾಭರಣಗಳನ್ನು ತೊಟ್ಟುಕೊಂಡನು. ಏರು ಕಾಂತಿಯಲ್ಲಿ ಸಿಂಹಾಸನದ ಮೇಲೆ ಕುಳಿತನು. ಅಲ್ಲಿ ನೆರೆದಿದ್ದ ರಾಜರುಗಳು ನಳನೃಪನನ್ನು ನೋಡಿ– ಈತನು ಬ್ರಹ್ಮನೇ? ದೇವೇಂದ್ರನೇ? ಮನ್ಮಥನೇ? ವಿಷ್ಣುವೇ? ಚಂದ್ರನೇ? ಶಂಕರನೇ? ಶಿವ ಶಿವ! ಅವರಾರು ಅಲ್ಲ. ಈತ ನಮ್ಮ ನಳ ಚಕ್ರವರ್ತಿ. ಪೂತು, (1) ಮಝರೇ (2) ಎಂದು ಕೊಂಡಾಟದ ಉದ್ಗಾರದೊಡನೆ ಸಂಭ್ರಮಿಸಿದರು.

ನಗರದ ಜನರೆಲ್ಲ ಬಂದು ನಳನೃಪನನ್ನು ನೋಡಿ ಕಾಣಿಕೆಗಳನ್ನು ನೀಡಿ ಮುದಗೊಂಡರು. ಋತುಪರ್ಣನು ಮಂತ್ರಿ ಮಾನ್ಯರೊಡನೆ ಬಂದನು. ಮುತ್ತು, ರತ್ನ, ವಜ್ರ, ಚಿನ್ನದ ಆಭರಣ ಹಾಗೂ ಇತರ ಅಮೂಲ್ಯ ವಸ್ತುಗಳನ್ನು ನಳನ ಮುಂದಿಟ್ಟು ಕೈ ಮುಗಿದು,

'ನೀವು ಚಂದ್ರವಂಶದ ನೃಪ ಸಾರ್ವಭೌಮರು. ಪ್ರಸಿದ್ಧ ಮಂಗಳ ಸ್ವರೂಪರು, ವೈರಿಗಳೆಂಬ ಆನೆಗಳಿಗೆ ಸಿಂಹದಂತಿರುವ ಯುದ್ಧ ವೀರರು, ದಯಾಶೀಲರು. ನಾನು ತಾಮಸ, ಮತಿಗೇಡಿ ಪಾಮರ. ನನ್ನ ಗುಣದೋಷಗಳನ್ನು ಚಿತ್ತದಲ್ಲಿಟ್ಟುಕೊಳ್ಳದೆ ನೀವು ಪ್ರೀತಿಯಿಂದ ಸಲಹಬೇಕು.

'ನೀವು ರಥಕ್ಕೆ ಕುದುರೆಗಳನ್ನು ಹೂಡಿದಾಗಲೇ ನಿಮ್ಮನ್ನು ತಿಳಿಯದ ಮೂಢಮತಿ ಸಾರಥಿಯಾಗಿಸಿಕೊಂಡೆ. ನನ್ನ ಅಪರಾಧಗಳನ್ನು ಕ್ಷಮಿಸಿ, ರಕ್ಷಿಸಿ' ಎಂದು ಪಾದಕ್ಕೆ ಎರಗಿದನು.